ಇವೆರಡನ್ನು ನನ್ನ ಸಮುದಾಯದ ಪುರುಷರಿಗೆ ನಿಷೇಧಿಸಲಾಗಿದೆ ಮತ್ತು ಮಹಿಳೆಯರಿಗೆ ಅನುಮತಿಸಲಾಗಿದೆ

ಅಲಿ ಬಿನ್ ಅಬೂತಾಲಿಬ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಮ್ಮ ಎಡಗೈಯಲ್ಲಿ ರೇಷ್ಮೆಯನ್ನು ಮತ್ತು ಬಲಗೈಯಲ್ಲಿ ಬಂಗಾರವನ್ನು ಎತ್ತಿ ಹಿಡಿಯುತ್ತಾ ಹೇಳಿದರು: "ಇವೆರಡನ್ನು ನನ್ನ ಸಮುದಾಯದ ಪುರುಷರಿಗೆ ನಿಷೇಧಿಸಲಾಗಿದೆ ಮತ್ತು ಮಹಿಳೆಯರಿಗೆ ಅನುಮತಿಸಲಾಗಿದೆ."
[صحيح] [رواه أبو داود والنسائي وابن ماجه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಮ್ಮ ಎಡಗೈಯಲ್ಲಿ ರೇಷ್ಮೆ ವಸ್ತ್ರವನ್ನು ಅಥವಾ ಅದರ ಒಂದು ತುಂಡನ್ನು ಮತ್ತು ತಮ್ಮ ಬಲಗೈಯಲ್ಲಿ ಬಂಗಾರದ ಒಡವೆ ಅಥವಾ ಬಂಗಾರದ ಬೇರೆ ವಸ್ತುವನ್ನು ಹಿಡಿದು ಹೇಳಿದರು: "ರೇಷ್ಮೆ ಮತ್ತು ಬಂಗಾರವನ್ನು ಧರಿಸುವುದನ್ನು ಪುರುಷರಿಗೆ ನಿಷೇಧಿಸಲಾಗಿದೆ ಮತ್ತು ಮಹಿಳೆಯರಿಗೆ ಅನುಮತಿಸಲಾಗಿದೆ."

http://www.sunnah.global/hadeeth/kn/show/4292